**ಪ್ರಶ್ನೆ:** ಒಂದೇ ಯೋಗದಲ್ಲಿ ಉಳಿದ ಮೂರೂ ಸೇರಿಕೊಂಡಿವೆಯೆ?

**ಮಹಾರಾಜ್:** ಹೌದು, ಸೇರಿಕೊಂಡಿರುತ್ತವೆ.

**ಪ್ರಶ್ನೆ:** ನಾವು ಕೆಲಸ ಮಾಡಿಯಾದ ಮೇಲೆ ಉಪಾಸನೆಗಾಗಿ ಕುಳಿತುಕೊಳ್ಳುತ್ತೇವೆ, ಅಥವಾ ಅದರ ನಡುವೆಯೇ ಒಂದು ಕಾಲವನ್ನು ನಿಗದಿಮಾಡುತ್ತೇವೆ. ಹಾಗಾದರೆ ಇದು ಬೇರೆ..

**ಮಹಾರಾಜ್:** ಇದೇ ನಮ್ಮ ಅಪೂರ್ಣತೆ. ಎಲ್ಲಿ ಕರ್ಮ ಮಾಡುತ್ತೇವೋ ಅಲ್ಲಿ ಯೋಗವಿಲ್ಲ; ಎಲ್ಲಿ ಯೋಗ ಮಾಡುತ್ತೇವೋ ಅಲ್ಲಿ ಭಕ್ತಿಯಿಲ್ಲ; ಭಕ್ತಿಯನ್ನಾಚರಿಸುವಲ್ಲಿ ಜ್ಞಾನವಿಲ್ಲ. ಇದನ್ನೇ ನಮ್ಮಲ್ಲಿನ ಅಪೂರ್ಣತೆ ಎಂದು ಹೇಳುವುದು.

**ಪ್ರಶ್ನೆ:** ಮಹಾರಾಜ್, ನಾವು ಸಾಮಾನ್ಯ ಜನರ ವಿಷಯ ಹೇಳುತ್ತೇವೆ, ಒಬ್ಬಾತ ಕನಿಷ್ಠ ಪಕ್ಷ ಒಂದು plan ಮಾಡಿ, ಇಂತಿಷ್ಟು ಸಮಯ – ಒಂದು ಘಂಟೆ ಜಪ, ಒಂದೂವರೆ ಘಂಟೆ ಜಪ ಎಂದು ಮಾಡುತ್ತಾನೆ.

**ಮಹಾರಾಜ್:** ಹಾಗೆ ಮಾಡಲಿ. ಆದರೆ ಏಕೆ ಅದನ್ನು ಮಾಡುತ್ತಾನೆಂದು ಅವನಿಗೆ ತಿಳಿದಿರಬೇಕು, ಅಷ್ಟೆ. ಗುರಿ ತಲುಪಲು ಅಥವಾ ಮುಕ್ತಿಗಾಗಿ ವಿಶೇಷ ಪ್ರಯತ್ನ ಮಾಡಲೇಬೇಕು. ಇದರಲ್ಲಿ ಇದಕ್ಕೆ ಇಂತಿಷ್ಟು, ಅದಕ್ಕೆ ಇಂತಿಷ್ಟು ಅಂತ ಮಾಡಬಾರದು. ಜ್ಞಾನಮಾರ್ಗವನ್ನು ಅವಲಂಬಿಸುವಾಗ ಭಕ್ತಿಯನ್ನೂ ಆಚರಿಸಬೇಕು. ಭಕ್ತಿಮಾರ್ಗದಲ್ಲಿ ನಡೆಯುವಾಗ ಕರ್ಮವನ್ನು ಜೊತೆಗೂಡಿಸಬೇಕು. ಕರ್ಮ ಮಾಡುವಾಗ ಯೋಗವನ್ನು ಸೇರಿಸಬೇಕು. ಎಲ್ಲ ಏಕಕಾಲದಲ್ಲಿ ನಡೆಯಬೇಕು, ಭಾಗಶಃ ಅಲ್ಲ. ಅರ್ಥವಾಯಿತೆ?

**ಪ್ರಶ್ನೆ:** ಹೌದು. ಎಲ್ಲವೂ ಒಂದೇಬಾರಿ ನಡೆಯುವುವು; ಒಂದರ ಜೊತೆಗೆ ಉಳಿದವೂ ಇರುವವು.

**ಮಹಾರಾಜ್:** ಒಂದೇ ಬಾರಿಗೆ, ಒಂದೇ ಕಾಲದಲ್ಲಿ ಯೋಗ ಮಾಡುವುದೇ ಸಮನ್ವಯ. '**ಯುಗಪತ್**' – ಪ್ರತಿಯೊಂದು ಯೋಗದಲ್ಲೂ ಉಳಿದ ಯೋಗಗಳು ಅಂತರ್ಗತವಾಗಿವೆ.

**ಪ್ರಶ್ನೆ:** ಆಚಾರ್ಯ ಶಂಕರರು '**ವಿವೇಕ ಚೂಡಾಮಣಿ**'ಯಲ್ಲಿ ಪ್ರಮಾದದ ವಿಚಾರವಾಗಿ ಸಾಕಷ್ಟು ಹೇಳುತ್ತಾರೆ, ಸಾಧಕರ ಜೀವನದಲ್ಲಿ ಪ್ರಮಾದ ಬರಬಾರದು ಎನ್ನುತ್ತಾರೆ. ನಮ್ಮ ದೈನಂದಿನ ಜೀವನದಲ್ಲಿ ಅದನ್ನು ಹೇಗೆ ಅಳವಡಿಸಿಕೊಳ್ಳಬೇಕು?

**ಮಹಾರಾಜ್:** ಗುರಿಯನ್ನು ಮರೆಯಬಾರದು. ಏನು ಮಾಡಬೇಕೆಂದಿದ್ದರೂ ನಿನ್ನ ಗುರಿಯನ್ನು ಗಮನದಲ್ಲಿಟ್ಟುಕೊಂಡೇ ಮಾಡಬೇಕು. ನಮ್ಮ ಅಂತಿಮ ಗುರಿ ಮುಕ್ತಿ ಅಥವಾ ಬ್ರಹ್ಮಸ್ವರೂಪದ ಸ್ಥಿತಿಯನ್ನು ಪಡೆಯುವುದು. ಆ ಗುರಿಯನ್ನು ನೆನಪಿನಲ್ಲಿಟ್ಟುಕೊಂಡೇ ಎಲ್ಲವನ್ನೂ ಮಾಡಬೇಕು. ಅಪ್ರಮಾದವೆಂದರೆ ಇದೇ.

**ಪ್ರಶ್ನೆ:** ಅಪ್ರಮಾದವನ್ನು ಹೊಂದಲು ಬೇರೆ ಸಾಧನೆ ಇದೆಯೆ?

**ಮಹಾರಾಜ್:** ಇದೇ ಸಾಧನೆ, ಅಪ್ರಮಾದಕ್ಕೆ ಬೇರೆ ಏನು ಸಾಧನೆ?

**ಪ್ರಶ್ನೆ:** ಪ್ರಮಾದವನ್ನು ತಡೆಯುವುದು, ಆ ಪ್ರಯತ್ನವೇ ಸಾಧನೆ.

**ಮಹಾರಾಜ್:** ಪ್ರಯತ್ನವಲ್ಲ, ಗುರಿಯನ್ನು ಮನಸ್ಸಿನಲ್ಲಿ ಸದಾ ಎಚ್ಚರವಾಗಿ ಇಟ್ಟುಕೊಳ್ಳುವುದು.

**ಪ್ರಶ್ನೆ:** ತೋತಾಪುರಿ ನಿರ್ವಿಕಲ್ಪ ಸಮಾಧಿ ಹೊಂದಿದ್ದರು. ಅವರಿಗೆ ಬ್ರಹ್ಮಜ್ಞಾನವೇ ಆಗಿತ್ತು, ಆದರೂ ಅವರು ಒಬ್ಬ ವ್ಯಕ್ತಿಗೆ ಕೋಪದಿಂದ ಹೊಡೆಯಲು ಹೊರಟಿದ್ದರು. ಹೀಗೇಕೆ ಆಗುತ್ತದೆ?

**ಮಹಾರಾಜ್:** ಶ್ರೀರಾಮಕೃಷ್ಣರು ಹೇಳುತ್ತಿದ್ದರು, ಎಲ್ಲವೂ ಮಹಾಮಾಯೆಯ 'ಅಂಡರ್' (ಅಧೀನದಲ್ಲಿ) ಎಂದು.

**ಪ್ರಶ್ನೆ:** ಆದರೆ ತೋತಾಪುರಿಗೆ ಬ್ರಹ್ಮಜ್ಞಾನವಾಗಿತ್ತಲ್ಲವೆ?

**ಮಹಾರಾಜ್:** ಆದರೇನಂತೆ? ದೇಹಧಾರಿಯಾದವನು ಮಹಾಮಾಯೆಗೆ ಅಧೀನ.

**ಪ್ರಶ್ನೆ:** ಅಧೀನ ಎಂದರೇನು?

**ಮಹಾರಾಜ್:** ಅಧೀನವೆಂದರೆ, ಮಹಾಮಾಯೆಯ ಮೂಲಕವೇ ಎಲ್ಲರೂ ನಿಯಂತ್ರಣಕ್ಕೊಳಪಡುತ್ತಾರೆ.

**ಪ್ರಶ್ನೆ:** ಜಗತ್ತಿನ ದುಃಖದ ಅನುಭವವೆಲ್ಲ ಇದರೊಂದಿಗೆ (ತಮ್ಮ ದೇಹವನ್ನು ಕುರಿತು) ಆಗಿ ಹೋಯಿತು ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಈ ವಾಕ್ಯದ ಅರ್ಥ ಏನು? ಇನ್ನೊಂದೆಡೆ ಶ್ರೀಮಾತೆ ಎಷ್ಟೊಂದು ಕಷ್ಟ ಅನುಭವಿಸಿದರು! ಸ್ವಾಮೀಜಿ, ಶ್ರೀರಾಮಕೃಷ್ಣರ ನೇರ ಶಿಷ್ಯಂದಿರು ಎಷ್ಟೊಂದು ಕಷ್ಟ ಅನುಭವಿಸಿದ್ದರು! ಈಗಲೂ ಜಗತ್ತಿನಲ್ಲಿ ಜನರ ಕಷ್ಟಗಳು ಕಡಿಮೆಯಾದದ್ದು ಕಂಡುಬರುತ್ತಿಲ್ಲ.

**ಮಹಾರಾಜ್:** ಶ್ರೀರಾಮಕೃಷ್ಣರು ಏನು ಹೇಳಿದ್ದಾರೋ, ಅದರ ತಾತ್ಪರ್ಯವೇನೆಂದು ಅವರೇ ಬಲ್ಲರು. ಕ್ರೈಸ್ತರು ಹೇಳುತ್ತಾರೆ, 'vicarious atonement'– ಕ್ರಿಸ್ತನು ಪರರ ದುಃಖವನ್ನು ಸ್ವೀಕರಿಸಿ, ತನ್ನ ಪ್ರಾಣವನ್ನೇ ಶಿಲುಬೆಗೆ ಅರ್ಪಿಸಿದ ಎಂದು. ಪ್ರಾಣಾರ್ಪಣೆ ಮಾಡಿ, ಆ ಮೂಲಕ ಜಗತ್ತಿನ ದುಃಖಕ್ಕೆ, ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಂಡ. ಇದರಿಂದ ಜಗತ್ತಿನ ಪಾಪ ಸಂಪೂರ್ಣ ದೂರವಾಯಿತೆ? ಗೀತೆಯಲ್ಲಿ ಜಗತ್ತಿನ ಬಗ್ಗೆ, '**ಅನಿತ್ಯಮಸುಖಂ ಲೋಕ ಮಿಮಂ ಪ್ರಾಪ್ಯ ಭಜಸ್ವ ಮಾಮ್**' ಎಂದು ಹೇಳಿದೆ. ಈ ಜಗತ್ತು ಅನಿತ್ಯ ಮತ್ತು ದುಃಖಮಯ. ಇಲ್ಲಿಗೆ ಬಂದು ನಾವು ಸಾಧನೆ, ಭಜನೆ ಮಾಡುತ್ತೇವೆ. ಈ ರೀತಿಯ ಒಂದು ಜೀವನವನ್ನು ಶ್ರೀರಾಮಕೃಷ್ಣರು ತೋರಿಸಿಕೊಟ್ಟು ಹೋದರು. ನೋಡು, ಅವರು ಎಷ್ಟೊಂದು ದುಃಖವನ್ನು ಅನುಭವಿಸಿದರು! ಅವರದು ಅಪಾಪವಿದ್ಧ (ಪಾಪರಹಿತ) ಶರೀರ. ಆದರೂ ಅವರಿಗೆ ಅಷ್ಟೊಂದು ಕಷ್ಟ ಯಾಕೆ ಬಂತು? ಅವರು ಹೇಳುತ್ತಾರೆ, ಯಾರು ತಮ್ಮಲ್ಲಿಗೆ ಬರುತ್ತಾರೋ, ಅವರ ದುಃಖ–ಕಷ್ಟಗಳನ್ನು ತಾವು ಸ್ವೀಕರಿಸಬೇಕಾಗುವುದು ಎಂದು. ಈ ದೇಹದ ಮೂಲಕವೇ ಎಲ್ಲವನ್ನೂ ಅನುಭವಿಸಬೇಕಾಗುತ್ತದೆ.

**ಪ್ರಶ್ನೆ:** ಅಂದರೆ, ಇದರಿಂದ ಜನರ ದುಃಖಾನುಭವ ಇಲ್ಲದಾಗುವುದಿಲ್ಲ ಎಂದು ಹೇಳಬಹುದು.

**ಮಹಾರಾಜ್:** ಹೌದು, ಇಲ್ಲದಿದ್ದರೆ ಜಗತ್ತು ಜಗತ್ತಾಗಿ ಉಳಿಯುತ್ತಿರಲಿಲ್ಲ. ✷